## ನಕ್ಕುಬಿಡಿ



ಹೆಂಡತಿ: ಆನ್‌ಲೈನ್‌ನಲ್ಲಿ ಬುಕ್ ಮಾಡಿದ ಪಾರ್ಸಲ್ ಬಂತು ನೋಡ್ರಿ ಎಂದಳು.

ಗಂಡ: ಯಾಕೇ ಸುಮ್ನೇ ಬೇಡವಾದದಕ್ಕೆ ಖರ್ಚು ಮಾಡ್ತಿಯಾ?

ಹೆಂಡತಿ: ನೀವು ಅಷ್ಟೇ ಬೇಡದೆ ಇರುವುದಕ್ಕೆ ಖರ್ಚು ಮಾಡ್ತಿರಾ?

ಗಂಡ: ನಾನು ಅಂತಹದ್ದೇನು ಖರ್ಚು ಮಾಡಿದ್ದೇನೆ? ಬೇಡದೆ ಇರುವ ವಸ್ತುವಿಗೆ...

ಹೆಂಡತಿ: ಎಲ್.ಐ.ಸಿಗೆ ಅಷ್ಟೊಂದು ಪ್ರಿಮಿಯಂ ಕಟ್ಟುತ್ತೀರಿ ಅದು ವೇಸ್ಟ್ ಅಲ್ವಾ? ಸಾಯೋ ಟೈಂ ಬಂದಾಗ ಹೊರಗಡೆ ಹೋಗೋದು ಬಿಟ್ಟು ಮನೆಯಲ್ಲೆ ಇರ್ತಿರಿ.

***

ಮಗ: ಅಪ್ಪಾ, ನೀನು ಅಮ್ಮನ ಮದುವೆಯಾಗಿ 20ವರ್ಷ ಆದರೂ ಅಮ್ಮನನ್ನು ಡಾರ್ಲಿಂಗ್, ಚಿನ್ನಾ, ಹನಿ ಅಂತ ಕರೆಯುತ್ತಿಯಲ್ಲ ಅಷ್ಟು ಪ್ರೀತಿನಾ ಅಮ್ಮನ ಮೇಲೆ?

ಅಪ್ಪ: ಅಯ್ಯೋ ಹಾಗೆನಿಲ್ಲ ಕಣೋ! ನಿಮ್ಮ ಅಮ್ಮನ ಹೆಸರು ಮರೆತು 10 ವರ್ಷವಾಯ್ತು. ಕೇಳಿದರೆ ದೊಡ್ಡ ಜಗಳವೇ ಆಗುತ್ತೆ ಅದಕ್ಕೆ ಹೀಗೆಲ್ಲ ಕರೆದು ಮ್ಯಾನೇಜ್ ಮಾಡುತ್ತಿದ್ದೇನೆ.

***

ಅದೊಂದು ಪ್ರಬಂಧ ಸ್ಪರ್ಧೆ ಅಲ್ಲಿಯ ಪ್ರಶ್ನೆ ಹೀಗಿತ್ತು.

'ಶಾಂತಿ, ನೆಮ್ಮದಿ ಹಾಗೂ ಸಂತೋಷ'ದ ಬಗ್ಗೆ ಒಂದೇ ಸಾಲಿನಲ್ಲಿ ಬರೆಯಿರಿ.

ಸಮಯವಾದ ಬಳಿಕ, ತೀರ್ಪುಗಾರರು ಬಹಳ ಸಂತೋಷದಿಂದ ಒಬ್ಬ ವ್ಯಕ್ತಿಯ ಕೈ ಕುಲುಕಿ ಬೆನ್ನು ತಟ್ಟುತ್ತಿದ್ದರು.

ಏಕೆಂದರೆ ಆತ ತನ್ನ ಪ್ರಬಂಧವನ್ನು 'ನನ್ನ ಹೆಂಡತಿ ಮಲಗಿದ್ದಾಳೆ' ಹೀಗೆ ಪ್ರಬಂಧ ಬರೆದಿದ್ದ.

***

ರೋಗಿ: ಡಾಕ್ಟ್ರೇ ನನಗೆ ಎರಡು ಇಂಜೆಕ್ಷನ್ ಯಾಕೇ ಕೊಟ್ಟಿದ್ದು?

ಆನ್‌ಲೈನ್ ಪದವಿ ಪಡೆದ ಡಾಕ್ಟರ್ ವಿಟಮಿನ್ ಬಿ12 ಇಂಜೆಕ್ಷನ್ ಖಾಲಿ ಆಗಿತ್ತು. ಆದ್ದರಿಂದ ವಿಟಮಿನ್ ಬಿ 6 ಎರಡು ನೀಡಿದೆ.

***

ಜಿಪುಣ ಗಂಡ ತನ್ನ ಹೆಂಡತಿಯನ್ನು ಸುತ್ತಾಡಿಸುವುದಕ್ಕೆ ಕರೆದುಕೊಂಡು ಹೋದ.

ಹೆಂಡತಿ: ರ‍್ರೀ! ... ತುಂಬಾ ಬಾಯಾರಿಕೆ ಆಗ್ತಿದೆ ಒಂದು ಬಾಟಲ್ ನೀರು ಕೊಡಿಸ್ರಿ ಎಂದಳು.

ಜಿಪುಣ ಗಂಡ: ಬರಿ ನೀರು ಸಾಕಾ ಅದರ ಜೊತೆ ಬಿಸಿ ಬಿಸಿ ಸಮೋಸಾ ಕೊಡ್ಸಿದ್ರೆ ಹೇಗಿರುತ್ತೆ?

ಹೆಂಡತಿ: ಅಬ್ಬಾ ಅದಕ್ಕಿಂತ ಬೇರೆ ಭಾಗ್ಯ ಬೇಕಾ ಕೇಳುತ್ತಿದ್ದರೆ ಬಾಯಲ್ಲಿ ನೀರು ಬಂತು ನೋಡಿ ಎಂದಳು.

ಜಿಪುಣ ಗಂಡ: ತಕ್ಷಣ ಬಾಯಲ್ಲಿ ನೀರು ಬಂತಲ್ಲ ಅದನ್ನೆ ಕುಡ್ದು ಬಿಡು ಮತ್ತೆ ಸುಮ್ನೇ ಬಾಟಲ್ ನೀರಿಗ್ಯಾಕೆ ದುಡ್ಡು ದಂಡ ಎಂದ.

***

ಡಾಕ್ಟರ್: ಬೀಡಿ ಸೇದಿದರೆ ಕ್ಯಾನ್ಸರ್ ಬರುತ್ತೆ.

ರೋಗಿ: ಹೌದಾ ಡಾಕ್ಟ್ರೇ? ಆದರೆ ನಾನು ಸೇದಿದರೆ ಬರೀ ಹೊಗೆ ಮಾತ್ರ ಬರುತ್ತದೆ.

***

ಗಂಡ: ನೀನು ಯಾಕೇ ಬ್ಯೂಟಿಪಾರ್ಲರ್‌ಗೆ ಹೋಗ್ತಿಯಾ?

ಹೆಂಡತಿ: ನಿಮ್ಮ ಕಣ್ಣಿಗೆ ಚಂದ ಕಾಣಿಸಲು.

ಗಂಡ: ಅದ್ಸರಿ ನೀವು ಯಾಕೇ ಬಾರ್‌ಗೆ ಹೋಗ್ತಿರಾ?

ಗಂಡ: ನೀನು ನನ್ನ ಕಣ್ಣಿಗೆ ಚಂದ ಕಾಣಿಸಲು.

***

ಡಾಕ್ಟರ್: ಆಕ್ಸಿಡೆಂಟ್‌ನಲ್ಲಿ ನಿಮ್ಮ ಹೆಂಡತಿಯ ತುಟಿ ಹರಿದಿದೆ ಹೊಲಿಗೆ ಹಾಕಬೇಕು.

ಗಂಡ: ಆಯ್ತು ಡಾಕ್ಟ್ರೇ, ಎರಡು ತುಟಿ ಸೇರಿಸಿ ಹಾಕಿ ಫೀಸು ಡಬ್ಬಲ್ ನೀಡುತ್ತೇನೆ.

***

ನ್ಯಾಯ್ಯಾಧೀಶರು: ಯಾಕಯ್ಯಾ ಅವನನ್ನು ಸಿಕ್ಕಾಪಟ್ಟೆ ಗಾಯವಾಗುವ ಹಾಗೆ ಹೊಡೆದೆ?

ಗುಂಡ: ಎರಡು ವರ್ಷಗಳ ಕೆಳಗೆ ಅವನು ನನಗೆ ಘೇಂಡಾಮೃಗ ಅಂತ ಬೈದಿದ್ದ ಮಹಾಸ್ವಾಮಿ.

ನ್ಯಾಯ್ಯಾಧೀಶರು: ಅದಕ್ಕೆ... ಎರಡು ವರ್ಷ ಆದ ಮೇಲೆ ಏಕೆ ಹೊಡೆದೆ?

ಗುಂಡ: ಮಹಾಸ್ವಾಮಿ, ನಾನು ಘೇಂಡಾಮೃಗವನ್ನು ನಿನ್ನೆ ಅಷ್ಟೇ ಝೂನಲ್ಲಿ ನೋಡಿದೆ.

***

ಸ್ವಾಮಿಗಳು ಪ್ರವಚನ ಹೇಳ್ತಿದ್ರು

ವೈವಾಹಿಕ ಜೀವನದಲ್ಲಿ ಗಂಡ ಹೆಂಡತಿ ಸೈಕಲಿನ ಎರಡು ಚಕ್ರಗಳಿದಂತೆ.

ಎಲ್ಲರ ಮಧ್ಯ ಕುಳಿತ್ತಿದ್ದ ತಿಮ್ಮ ಎದ್ದು ನಿಂತು ಕೇಳಿದ ಸ್ವಾಮಿಗಳೆ ನನಗೊಬ್ಬಳು ಲವ್ವರ್ ಕೂಡ ಇದ್ದಾಳೆ ನಮ್ಮ ವೈವಾಹಿಕ ಜೀವನ ಮೂರು ಚಕ್ರದ ಆಟೋ ಇದ್ದಂತೆ ಅಲ್ವಾ ಎಂದ.

***

ತನ್ನ ಪತ್ನಿಯಿಂದ ವಿಚ್ಛೇದನ ಪಡೆಯಬಯಸಿದ ವ್ಯಕ್ತಿಯೊಬ್ಬ ವಕೀಲನಿಗೆ ಕೇಳಿದ 'ವಿಚ್ಛೇದನ ಕೊಡಿಸುವ ಫೀಸ್ ಎಷ್ಟು?'

5000 ರೂಪಾಯಿಗಳು ವಕೀಲನೆಂದ.

ನಮ್ಮ ರಿಜಿಸ್ಟರ್ ಮದುವೆಗೆ ಖರ್ಚಾದದ್ದು ಕೇವಲ 500ರೂಪಾಯಿ ಎಂದ ಆ ವ್ಯಕ್ತಿ.

ಹೌದು. ಆದರೆ, ಸ್ವಾತಂತ್ರ್ಯಕ್ಕೆ ಬೆಲೆ ಕಟ್ಟಲಾಗದು ಎಂಬುದು ತಮಗೆ ಗೊತ್ತಿಲ್ಲವೆ? ಎಂದ ವಕೀಲ.

***

ಆಂಟಿ: ಮದುವೆ ಆಯ್ತೆನಮ್ಮಾ ನಿಂದು

ಹುಡುಗಿ: ಹೂಂ ಆಯ್ತು ಆಂಟಿ

ಆಂಟಿ: ಹುಡುಗ ಏನ್ ಮಾಡ್ಕೊಂಡಿದಾನೆ

ಹುಡುಗಿ: ಬೇಜಾರ್ ಮಾಡ್ಕೊಂಡಿದ್ದಾನೆ.

***

ತಿಮ್ಮ ಕುಡಿದು ರಸ್ತೆಯಲ್ಲಿ ಹೊರಟಿದ್ದ. ಅವನ ಹಿಂದೆ ಇಬ್ಬರು ಹುಡುಗಿಯರು ಜಗಳ ಆಡುತ್ತಿದ್ದರು.

ಒಬ್ಬಳು: ಆ ದೇವರು ಇಂತಹ ಕುಡುಕ ಗಂಡನ್ನ ಕೊಟ್ಟರೆ ಬುದ್ಧಿ ಬರುತ್ತೆ ನಿಂಗೆ

ಇನ್ನೊಬ್ಬಳು: ಇಲ್ಲ ದೇವರು ನಿನಗೆ ಇಂತಹ ಕುಡುಕ ಗಂಡನನ್ನೆ ಕೋಡೋದು

ಅವರ ಮಾತನ್ನು ಕೆಳಿಸಿಕೊಂಡ ಗುಂಡ ಮೇಡಂ ನಾನು ಈಗ ಹೋಗ್ಲಾ ಅಥವಾ ವೇಟ್ ಮಾಡ್ಲಾ?

ಸಂಗ್ರಹ: ಶರದ ಕುಲಕರ್ಣಿ ಬೀದರ


